ಭೂ ಸುಧಾರಣೆ ಕಾನೂನಿನಂತೆ ತೀರ್ಮಾನವಾದ ಭೂಮಿಗೆ ಹಕ್ಕುಪತ್ರ ಕೊಡುವ ಬಗ್ಗೆ

575. ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ಭೂ ಸುಧಾರಣೆ ಕಾನೂನಿನನ್ವಯ ತೀರ್ಮಾನವಾದ ಭೂಮಿಯ ಹಕ್ಕುಪತ್ರ ಗೇಣಿದಾರರಿಗೆ ನೀಡದೆ ಇರುವವರ ಸಂಖ್ಯೆ ಎಷ್ಟು?

ಆ) ಈ ರೀತಿ ನೀಡದಿರಲು ಕಾರಣಗಳೇನು ಹಾಗೂ ಎಲ್ಲಾ ಗೇಣಿದಾರರಿಗೆ ಕೂಡಲೇ ಹಕ್ಕುಪತ್ರ ನೀಡುವಂತೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):–

ಅ) 300 ಪ್ರಕರಣಗಳು.

ಆ) ಈ ಪ್ರಕರಣಗಳಲ್ಲಿ ಭೂ ನ್ಯಾಯ ಮಂಡಳಿಯ ಆದೇಶದ ವಿರುದ್ಧ ಅಪೀಲು ಸಲ್ಲಿಸಿದ್ದು ಅಂತಿಮ ತೀರ್ಮಾನ ಬಾಕಿ ಇರುವುದರಿಂದ, ಈ ಪ್ರಕರಣಗಳಲ್ಲಿ ಹಕ್ಕುಪತ್ರ ನೀಡಿರುವುದಿಲ್ಲ. ಮೇಲ್ಮನವಿ ತೀರ್ಮಾನವಾದ ಕೂಡಲೇ ಅರ್ಹ ಪ್ರಕರಣಗಳಲ್ಲಿ ಹಕ್ಕುಪತ್ರ ನೀಡಲಾಗುವುದು.

ಬೈಂದೂರು ತಾಲ್ಲೂಕು ರಚನೆ ಕುರಿತು

496. ಶ್ರೀ ಜಿ.ಎಸ್. ಆಚಾರ್ (ಬೈಂದೂರು) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪುನರ್ ವಿಂಗಡಣಾ ಆಯೋಗದ ವರದಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತ್ಯೇಕ ಬೈಂದೂರು ತಾಲ್ಲೂಕು ರಚನೆ ಆಗಬೇಕೆಂದು ಶಿಫಾರಸ್ಸು ಮಾಡಲಾಗಿದೆಯೇ?

ಆ) ಪ್ರತ್ಯೇಕ ತಾಲ್ಲೂಕಿನ ರಚನೆಗೆ ವಿಳಂಬವಾಗಿರಲು ಕಾರಣವೇನು?

ಇ) ಈ ಕುರಿತು ಯಾವಾಗ ಸೂಕ್ತ ನಿರ್ಧಾರ ಕೈಕೊಳ್ಳಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):–

ಅ) ಹೌದು.

ಆ) 1992ರ ಜನಗಣತಿ ಕಾರ್ಯ ಮುಗಿಯುವವರೆಗೆ ಅಂದರೆ 30–6–91ರವರೆಗೂ ಯಾವುದೇ ಕಂದಾಯ ಗಡಿ/ಸರಹದ್ದುಗಳ ಬಡಾವಣೆ ಮಾಡಬಾರದೆಂದು ಭಾರತ ಸರ್ಕಾರದಿಂದ ಸೂಚನೆಯಿರುವುದರಿಂದ ವಿಳಂಬವಾಗಿರುತ್ತೆ.

ಇ) ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿ ಅಭಾವ ಉಂಟಾದ ಜಿಲ್ಲೆಗಳ ಬಗ್ಗೆ

493. ಶ್ರೀ ಕೆ. ಲಕ್ಕಣ (ರಾಜಾಜಿನಗರ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ವರ್ಷದಲ್ಲಿ ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಅಭಾವ ಉಂಟಾಗಿದೆ?

ಆ) ಹಾಗಿದ್ದಲ್ಲಿ, ಅಂತಹ ಜಿಲ್ಲೆಗಳಿಗೆ ಏನು ಪರಿಹಾರ ಕ್ರಮ ಕೈಗೊಳ್ಳಲಾಗಿದೆ?

ಇ) ಪರಿಹಾರ ಕ್ರಮ ಕೈಗೊಂಡಿದ್ದರೆ ಅದರ ವಿವರಗಳನ್ನೊದಗಿಸುವುದು?